ಮಾತನ್ನು ಶಾಸಕರು ಹೇಳಿದ ಮೇಲೂ, ಅವರು ಬರಬೇಕು, ಖಾಸಗೀ ಬಸ್ಸುಗಳು ಮಾಲೀಕರು ಬರಬೇಕು, ಅವರೇ ಚರ್ಚೆ ಮಾಡಬೇಕೆಂದು ಹೇಳಿದರೆ ಹೇಗೆ? ಅದರಲ್ಲ ಏನಿದೆ, ಅನೇಕ ಮಾನ್ಯ ಸದಸ್ಯರು ಇಲ್ಲಿ ತಮಗೆ ಕನ್‌ವೀನ್ಸ್ ಮಾಡುತ್ತಿದ್ದಾರೆ. ಹಾಕಿರತಕ್ಕ ತೆರಿಗೆ ಸರಿಯಲ್ಲವೆಂದು ಹೇಳಿದ್ದಾರೆ. ನೀವು ಟೈರ್ ಮೇಲೆ ತೆರಿಗೆ ಹಾಕಿದ್ದೀರಿ, ಬಿಡಿ ಭಾಗಗಳ ಮೇಲೆ ಹಾಕಿದ್ದೀರಿ. ಇದರಿಂದಾಗಿ ಬಸ್ಸುಗಳಿಲ್ಲದೆ ಮಕ್ಕಳಿಗೆ ತೊಂದರೆಯಾಗಿದೆ. ಮತ್ತು ವಿಶೇಷವಾಗಿ, ಶಿವಮೊಗ್ಗ, ಮಂಗಳೂರು, ಚಿಕ್ಕಮಗಳೂರು, ಹಾಸನ ಈ ಭಾಗದಲ್ಲಿ ತೊಂದರೆಯಾಗಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಿದರೂ ಪುನಃ ಅವರೇ ಬಂದು ಚರ್ಚೆ ಮಾಡಬೇಕೆಂದು ಹೇಳುವ ಅವಶ್ಯಕತೆ ಇಲ್ಲ. ಎರಡನೆಯದು, ಒಂದು ಸಾವಿರ ಬಸ್ಸುಗಳನ್ನು ಸ್ಪೇರ್ ಮಾಡಬೇಕಾದರೆ, ಅಲ್ಲಿ ತೊಂದರೆಯಾಗುತ್ತದೆ. ಒಂದು ಸಾವಿರ ಬಸ್ಸುಗಳು ಸರ್ಪಲಸ್ ಇದ್ದು, ಅಲ್ಲಿಂದ ಇಲ್ಲಿಗೆ ಷಿಫ್ಟ್ ಮಾಡಿದ್ದೇವೆಂದು ಹೇಳಿದರೆ, ಅದು ಒಂದು ಮಾತು. ಆದರೆ, ಒಂದು ಸಾವಿರ ಬಸ್ಸು ಬರಬೇಕಾದರೆ, ಸಾಮಾನ್ಯವಾದ ಮಾತಲ್ಲ. ಏನೋ 5 10 ಆದರೆ ಪರವಾಯಿಲ್ಲ. ಒಂದು ಜಾತ್ರೆಗೆ 50-60 ಬಸ್ಸು ಕೊಡಬೇಕಾದರೆ ಎಷ್ಟೋ ತಾಪತ್ರಯವಾಗುತ್ತದೆ. ಅನೇಕ ಜನರಿಗೆ ತೊಂದರೆ ಮಾಡಿ ಕೊಡಬೇಕಾಗುತ್ತದೆ. ಇಲ್ಲಿ ಒಂದು ಸಾವಿರ ಬಸ್ ಬರಬೇಕೆಂದರೆ, ಅಲ್ಲಿನ ಮಕ್ಕಳಿಗೆ, ಅಲ್ಲಿನ ಪ್ಯಾಸೆಂಜರ್ಸ್‌ಗೆ, ಅಲ್ಲಿನ ನಾಗರೀಕರಿಗೆ ತೊಂದರೆಯಾಗುವುದಿಲ್ಲವೇ? ಇದನ್ನು ಸ್ಪಷ್ಟವಾಗಿ, ಕನ್‌ವೀನ್ಸ್ ಮಾಡತಕ್ಕ ರೀತಿಯಲ್ಲಿ ಹೇಳಿದರೆ, ನೀವು ಒಪ್ಪಿಕೊಳ್ಳಬೇಕು. ಸರ್ಪಲಸ್ ತಂದಿದ್ದೇವೆಂದು ಒಂದು ಸಾರಿ ಹೇಳುತ್ತೀರಿ, ರಿಸರ್ವ್‌ನಲ್ಲಿಟ್ಟಿದ್ದೇವೆ ಕೊಟ್ಟು ಕಳುಹಿಸಿದ್ದೇವೆಂದು ಒಂದು ಸಾರಿ ಹೇಳುತ್ತೀರಿ. ಒಂದು ಸಾರಿ ಮ್ಯಾಕ್ಸಿ ಕ್ಯಾಬ್ ಹಾಕಿ ಸರಿ ಮಾಡುತ್ತೇವೆಂದು ಹೇಳುತ್ತೀರಿ. ಈ ರೀತಿಯಾಗಿ ಹೇಳತಕ್ಕಂಥಾದು ಸರಿಯಲ್ಲ. ಇಷ್ಟೆಲ್ಲಾ ಸದಸ್ಯರು ಹೇಳಿದಾಗ, ಈ ರೀತಿಯಾದ ಹಠಮಾರಿತನ ಇದ್ದರೆ, ಇದಕ್ಕೆ ನಮ್ಮ ಬಲವಾದ ಪ್ರೊಟೆಸ್ಟ್ ಇದೆ. ಏಕೆಂದರೆ, ಇದು ಅನ್ಯಾಯ ಇದೆ, ಇದನ್ನು ಸರಿಪಡಿಸಿ ಎಂದು ಹೇಳಿದರೂ ಕೂಡ, ತಾವು ಕೇಳುವುದಕ್ಕೆ ತಯಾರಿಲ್ಲ. ನೀವು ಹೇಳಿದ್ದೇ ಸರಿ ಎಂದು ಹೇಳುವುದಾದರೆ, ನಾವು ಈ ಸಭೆಯಲ್ಲಿ ಭಾಗವಹಿಸುವುದಿಲ್ಲ, ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ :- ಇಂತಹ ಸಣ್ಣಪುಟ್ಟ ವಿಷಯಗಳಿಗೆಲ್ಲಾ ನೀವು ವಾಕ್ ಔಟ್ ಮಾಡಿದರೆ ಹೇಗೆ? ಇವರಿಗೆ ಪ್ರಜಾತಂತ್ರದ ಎಸೆನ್ಸ್ ಗೊತ್ತಿಲ್ಲ. ಅವರು ಯಾರಿಗೂ ಹೇಳದೇ, ಕೇಳದೇ ಅವರಷ್ಟಕ್ಕೆ ಅವರೇ ಸ್ಟೈಕ್ ಮಾಡಿದರೆ ಸರಿಯೇ? ಸಿಮೆಂಟ್ ಮೇಲೆ